# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1721** |
| ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 23-03-2026 |
| ಉತ್ತರಿಸುವ ಸಚಿವರು | | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | 2015 ಜನವರಿ 9ರ ಬಳಿಕ ಬೆಂಗಳೂರು ನಗರ ಜಿಲ್ಲೆಯ 'ನೀಲಸಂದ್ರ ಗ್ರಾಮದ ಸರ್ವೇ ನಂ-79 ರಲ್ಲಿ 15 ಎಕರೆ 12 ಗುಂಟೆ ಜಮೀನಿನಲ್ಲಿ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ ಬೆಸ್ಕಾಂ ಅಧಿಕಾರಿಗಳನ್ನು ಅಮಾನತ್ತು ಮಾಡಿ ಇಲಾಖಾ ಕ್ರಮ ಕೈಗೊಳ್ಳಲಾಗಿದೆಯೇ; ಇಲ್ಲವಾದಲ್ಲಿ, ಯಾವಾಗ ಕ್ರಮ ಕೈಗೊಳ್ಳಲಾಗುವುದು: | ಸಹಾಯಕ ಆಯುಕ್ತರು, ಮುಜುರಾಯಿ ಕಾಮಗಾರಿಗಳು, ನಗರ ಸಭಾಂಗಣ, ಬೆಂಗಳೂರು ರವರು ಪತ್ರ ಸಂಖ್ಯೆ: ಮುಜ್(1) ಸಿಆರ್: 84/2014-15 ದಿನಾಂಕ 30.11.2020 ರಲ್ಲಿ, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೆವಿಕಂಪನಿರವರಿಗೆ ಬೆಂಗಳೂರು ನಗರ ತಿಗಳರಪೇಟೆ ಶ್ರೀಧರ್ಮರಾಯ ಸ್ವಾಮಿ ದೇವಾಲಯಕ್ಕೆ ಸೇರಿದ ನೀಲಸಂದ್ರ ಗ್ರಾಮದ ಸರ್ವೇ ನಂ 79 ರಲ್ಲಿ 15 ಎಕರೆ 12 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಅನಧಿಕೃತವಾಗಿ ನಿರ್ಮಿಸಿರುವ ಮನೆಗಳಿಗೆ ಯಾವ ದಾಖಲೆಗಳನ್ನು ಪಡೆದು ವಿದ್ಯುತ್ ಸಂಪರ್ಕ ನೀಡಿದ್ದು ಸದರಿ ದಾಖಲೆಗಳೊಂದಿಗೆ ವಿದ್ಯುತ್ ಸಂಪರ್ಕ ಪರವಾನಿಗೆಯ ದೃಢೀಕೃತ ಪ್ರತಿಯನ್ನು ತ್ವರಿತವಾಗಿ ನೀಡಲು ಕೋರಿರುತ್ತಾರೆ.<br>ಆದರೆ, ಬೆಂಗಳೂರು ನಗರ ಜಿಲ್ಲೆಯ ನೀಲಸಂದ್ರ ಗ್ರಾಮದ ಸರ್ವೇ ನಂ. 79 ರಲ್ಲಿ, ಜನವರಿ-2015 ರಿಂದ 30.11.2020 ರವರೆಗೆ ಒಟ್ಟು 229 ಸಂಖ್ಯೆಯ ಸ್ಥಾವರಗಳಿಗೆ ಸೇಲ್ ಡೀಡ್ (ಮಾರಾಟ ಪತ್ರ), ಸ್ವತ್ತಿನ ಮೇಲೆ ಋಣಭಾರ ರಹಿತ ಪತ್ರಗಳ ಆಧಾರದ ಮೇಲೆ ಮಾನ್ಯ ಕೆಇಆರ್ ಸಿ ಕಂಡಿಷನ್ ಆಫ್ ಪವರ್ ಸಪ್ಲೈನ ಸೆಕ್ಷನ್ 4 ರನ್ವಯ ಹಾಗೂ ಮುಜುರಾಯಿ ಇಲಾಖೆಯಿಂದ ಪತ್ರ (ಪತ್ರದ ದಿನಾಂಕ 30.11.2020) ಸ್ವೀಕೃತವಾಗುವ ಮುನ್ನವೇ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ.<br>ದಿನಾಂಕ 30.11.2020 ರ ಪತ್ರದಿಂದ, ಬೆವಿಕಂಪನಿಗೆ ಸದರಿ ಸರ್ವೇ ನಂ. ವಿವಾದಿತ ಸ್ಥಳವಾಗಿರುವುದಾಗಿ ಗಮನಕ್ಕೆ ಬಂದಿರುತ್ತದೆ. ಈ ಪತ್ರ ದಿನಾಂಕದ ನಂತರದಲ್ಲಿ ಯಾವುದೇ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿರುವುದಿಲ್ಲ.<br>ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ S3 ಉಪವಿಭಾಗ ಬೆವಿಕಂಪನಿರವರು ಉಪ ಆಯುಕ್ತರು ಬಿ.ಬಿ.ಎಂ.ಪಿ ಬೆಂಗಳೂರು ರವರಿಗೆ ದಿನಾಂಕ 22.09.2021, 18.08.2022 ಮತ್ತು 09.03.2023 ರಲ್ಲಿ ಪತ್ರದ ಮುಖಾಂತರ ಸದರಿ ಸ್ವತ್ತಿನ ನಕ್ಷೆಯ ಗಡಿಯನ್ನು ಹಾಗೂ ಬಿ.ಬಿ.ಎಂ.ಪಿ ಸಿಬ್ಬಂದಿಯನ್ನು ಬೆವಿಕಂಪನಿ ಸಿಬ್ಬಂದಿಯೊಂದಿಗೆ ಸಮೀಕ್ಷೆ ಮಾಡುವ ಸಲುವಾಗಿ ನಿಯುಕ್ತಿಗೊಳಿಸಲು ಕೋರಿರುತ್ತಾರೆ.<br>ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 20.06.2022 ರಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ಬೆವಿಕಂಪನಿ ಕೋರಮಂಗಲ ವಿಭಾಗ ಬೆಂಗಳೂರು ರವರು ಶ್ರೀ ಧರ್ಮರಾಯ ಸ್ವಾಮಿ ದೇವಾಲಯಕ್ಕೆ ಸೇರಿದ ಬೆಂಗಳೂರು ನಗರ ಜಿಲ್ಲೆಯ ನೀಲಸಂದ್ರ ಗ್ರಾಮ ಸರ್ವೇ ನಂ 79 ರಲ್ಲಿ 15 ಎಕರೆ 12 ಗುಂಟೆ ಜಮೀನಿನಲ್ಲಿ ಅನಧಿಕೃತ ಒತ್ತುವರಿದಾರರನ್ನು ಗುರುತಿಸಲು ನಿರ್ದಿಷ್ಟವಾದ ವಿವರವನ್ನು ನೀಡಲು ಹಾಗೂ ಮುಜರಾಯಿ ಇಲಾಖೆಯಿಂದ ಸಿಬ್ಬಂದಿಯನ್ನು ಬೆವಿಕಂಪನಿ ಸಿಬ್ಬಂದಿಯೊಂದಿಗೆ ಸಮೀಕ್ಷೆ ಮಾಡುವ ಸಲುವಾಗಿ ನಿಯುಕ್ತಿಗೊಳಿಸಲು ಕೋರಿರುತ್ತಾರೆ. (ಸದರಿ ಪ್ರತಿಗಳನ್ನು ಲಗತ್ತಿಸಲಾಗಿದೆ). |
| ಆ) | ಸದರಿ ಸರ್ವೇ ನಂಬರ್ ಭೂಮಿಯ ಮುಜರಾಯಿ ಇಲಾಖೆಯ ಜಾಗ ಎಂಬುದಾಗಿ ಇಲಾಖೆಯ ಗಮನಕ್ಕೆ ಯಾವಾಗ ಬಂದಿದೆ; (ವಿವರ ನೀಡುವುದು) | |
| ಇ) | ಬೆಂಗಳೂರು ನಗರ ಜಿಲ್ಲೆಯ ನೀಲಸಂದ್ರ ಗ್ರಾಮದ ಸರ್ವೇ ನಂ 79 ರಲ್ಲಿನ ಎಷ್ಟು ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ; ಯಾವ ಆಧಾರದಲ್ಲಿ ವಿದ್ಯುತ್ ಸಂಪರ್ಕ ನೀಡಲಾಗಿದೆ: ದೇವಸ್ಥಾನದ ಜಾಗ ಅಕ್ರಮವಾಗಿ ಒತ್ತುವರಿ ಮಾಡಿ ನಿರ್ಮಿಸಿದ ಅಕ್ರಮ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡಲು ಕಾರಣವೇನು: | |

| | | |
|---|---|---|
| | | ಈ ಮೇಲಿನ ಎಲ್ಲಾ ಪ್ರಕ್ರಿಯೆಯಿಂದಾಗಿ ದಿನಾಂಕ 03.03.2025, 4.03.2025 ಮತ್ತು 05.03.2025 ರಂದು ಸಹಾಯಕ ಆಯುಕ್ತರು, ಮುಜರಾಯಿ ಕಾಮಗಾರಿಗಳು, ಮುನ್ಸಿಪಲ್ ಕಾರ್ಪೋರೇಷನ್ ವಲಯ, ಭೂಮಾಪಕರು, ಕಂದಾಯ ಇಲಾಖೆ, ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ), ಎಸ್-3, ಆಸ್ಟೀನ್ ಟೌನ್ ಉಪವಿಭಾಗ ಹಾಗೂ ಸಹಾಯಕ ಇಂಜಿನಿಯರ್, ಪಾ & ಪಾ ಘಟಕ, ಆಸ್ಟೀನ್ ಟೌನ್ ಅಧಿಕಾರಿಗಳ ಸಮ್ಮುಖದಲ್ಲಿ ಜಂಟಿ ತಪಾಸಣೆ ನಡೆಸಿದ್ದು, ನೀಲಸಂದ್ರ ಗ್ರಾಮದ ಸರ್ವೇ ನಂಬರ್ 79 ರ ಪರಿವ್ಯಾಪ್ತಿಯಲ್ಲಿ ಗುರುತಿಸಿದ್ದು, ಸದರಿ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿದ ಮನೆಗಳು ಮತ್ತು ಅದರ ಆರ್. ಆರ್ ಸಂಖ್ಯೆಗಳನ್ನು ಗುರುತಿಸಲಾಗಿದ್ದು, ದಿನಾಂಕ 02.01.1982 ರಿಂದ 30.11.2020 ರವರೆಗೆ ಒಟ್ಟು 999 ಸಂಖ್ಯೆಯ ಆರ್. ಆರ್ ಸಂಖ್ಯೆಗಳು ಕಂಡು ಬಂದಿರುತ್ತದೆ.<br>ನೀಲಸಂದ್ರ ಗ್ರಾಮದ ಸರ್ವೇ ನಂಬರ್ 79 ರ ದೇವಸ್ಥಾನದ ಜಾಗದ ನಕ್ಷೆ ಮತ್ತು ಗಡಿಯ ವಿವರಗಳು ಲಭ್ಯವಿರಲಿಲ್ಲ. ಅನಧಿಕೃತ ಒತ್ತುವರಿದಾರರನ್ನು ಗುರುತಿಸಲು ನಿರ್ದಿಷ್ಟವಾದ ದಾಖಲೆಗಳು ಇರಲಿಲ್ಲ. ಮಾನ್ಯ ಕೆಇಆರ್‌ಸಿ ಕಂಡಿಷನ್ ಆಫ್ ಪವರ್ ಸಪ್ಲೈ ನ ಸೆಕ್ಷನ್ 4ರನ್ವಯ ವಿದ್ಯುತ್ ಸಂಪರ್ಕ ನೀಡಲಾಗಿದೆ.<br>ಮುಂದುವರೆದು, ಮಾನ್ಯ ಕೆಇಆರ್‌ಸಿ ಕಂಡಿಷನ್ ಆಫ್ ಸಪ್ಲೈ ನ ಸೆಕ್ಷನ್ 4ರನ್ವಯ ಹಾಗೂ ದಾಖಲಾತಿಗಳ ಆಧಾರದ ಮೇಲೆ ಅರ್ಜಿ ನೋಂದಾಯಿಸಿದ ನಂತರ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದು, ಮುಜರಾಯಿ ಇಲಾಖೆಯ ಪತ್ರ ದಿನಾಂಕ 30.11.2020 ರ ನಂತರ ಯಾವುದೇ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸದೇ ಇರುವುದರಿಂದ ಬೆವಿಕಂಪನಿ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. |
| ಈ) | ಅಕ್ರಮ ವಿದ್ಯುತ್ ಸಂಪರ್ಕ ಕಲ್ಪಿಸಿದ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು: ಯಾವ ಯಾವ ದಾಖಲೆಗಳನ್ನು ಪಡೆದುಕೊಂಡು ವಿದ್ಯುತ್ ಸಂಪರ್ಕ ಕಲ್ಪಿಸಿದೆ: ವಿದ್ಯುತ್ ಸಂಪರ್ಕ ಕಲ್ಪಿಸಿದ ಮನೆಗಳ ಸಮಗ್ರ ದಾಖಲೆಗಳೊಂದಿಗೆ ವಿವರ ನೀಡುವುದು; ಯಾವ ದಿನಾಂಕದಂದು ಅರ್ಜಿ ಸಲ್ಲಿಸಿದ್ದರು: ಸದರಿ ಅರ್ಜಿಯನ್ನು ಪರಿಶೀಲಿಸಿ ಅಧಿಕಾರಿ ಯಾರು; ವಿದ್ಯುತ್ ಸಂಪರ್ಕ ನೀಡಲು ಹೊರಡಿಸಿದ ಆದೇಶದ ಪ್ರತಿಯೊಂದಿಗೆ ಆದೇಶ ಹೊರಡಿಸಿದ ಅಧಿಕಾರಿಯ ಹೆಸರು, ಸಮಗ್ರ ವಿವರ ನೀಡುವುದು? | ಮುಜರಾಯಿ ಇಲಾಖೆಯ ಪತ್ರ ದಿನಾಂಕ 30.11.2020 ರ ನಂತರ ಯಾವುದೇ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸದೇ ಇರುವುದರಿಂದ ಬೆವಿಕಂಪನಿ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. |

ಸಂಖ್ಯೆ: ಎನರ್ಜಿ 97 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು